ಹೋಬಳಿಗಳಲ್ಲಿ ಅಕ್ರಮ, ಸಾರಾಯಿ ಮತ್ತು ಸೆಕೆಂಡ್ಸ್ ಮದ್ಯ ಯಥೇಚ್ಚವಾಗಿ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಆ) ಹಾಗಿದ್ದಲ್ಲಿ ಅಕ್ರಮ ಮಾರಾಟವಾಗುವ ಮದ್ಯವನ್ನು ನಿಲ್ಲಿಸಲು ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು):

ಅ) ಹೌದು.

ಆ) ಕಟ್ಟಾಯ ಮತ್ತು ಶಾಂತಿಗ್ರಾಮ ಹೋಬಳಿಗಳಲ್ಲಿ ಅಕ್ರಮ ಸಾರಾಯಿ, ಮದ್ಯ ಮಾರಾಟ ಮಾಡುತ್ತಿದ್ದ 39 ಪ್ರಕರಣಗಳನ್ನು ಪತ್ತೆ ಹಚ್ಚಿ ಪ್ರಕರಣಗಳಲ್ಲಿ 7281 ಲೀ. ಮದ್ಯ 545 ಲೀ. ಸಾರಾಯಿ ಮತ್ತು 30 ಲೀ. ಮದ್ಯಸಾರವನ್ನು ವಶಪಡಿಸಿಕೊಂಡು 38 ಆರೋಪಿಗಳ ವಿರುದ್ಧ ಮೊಕದ್ದಮೆ ದಾಖಲು ಮಾಡಿ ನ್ಯಾಯಾಲಯಕ್ಕೆ ಅಂತಿಮ ಆರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ. ಅಕ್ರಮ ಮದ್ಯ ಮತ್ತು ಸಾರಾಯಿ ಮಾರಾಟದಂತಹ ಕಾನೂನು ಬಾಹಿರ ಕೃತ್ಯಗಳನ್ನು ತಡೆಗಟ್ಟಲು ರಸ್ತೆ ಕಾವಲು, ರಾತ್ರಿ ಗಸ್ತು ಅಬಕಾರಿ ದಾಳಿಗಳನ್ನು ನಿರ್ವಹಿಸಲಾಗುತ್ತಿದೆ. ಅಕ್ರಮ ಕೃತ್ಯಗಳು ಕಂಡುಬಂದ ಸಂದರ್ಭಗಳಲ್ಲಿ ಕರ್ನಾಟಕ ಅಬಕಾರಿ ಕಾಯಿದೆಯಡಿ ಮೊಕದ್ದಮೆಗಳನ್ನು ದಾಖಲು ಮಾಡಲಾಗುತ್ತಿದೆ.

ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನ ಕೇಂದ್ರಗಳ ಸ್ಥಾಪನೆ.

1639(2139)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಉನ್ನತ ಶಿಕ್ಷಣ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಿಲೈಯನ್ಸ್ ಕಂಪನಿ ಮೂಲಕ ರಾಜ್ಯದಲ್ಲಿ 20,000 ಮಾಹಿತಿ ಕೇಂದ್ರಗಳನ್ನು (ಇನ್‌ಫಾರ್ಮೇಷನ್ ಕಿಯಾಸ್ಕ್) ಸ್ಥಾಪಿಸಲು ರಾಜ್ಯ ಸರ್ಕಾರ ನಿರ್ಧರಿಸಲಾಗಿತ್ತೆ;

ಆ) ಹಾಗಿದ್ದಲ್ಲಿ ಈವರೆಗೆ ಎಷ್ಟು ಕೇಂದ್ರಗಳನ್ನು ಎಲ್ಲೆಲ್ಲಿ ಪ್ರಾರಂಭಿಸಲಾಗಿದೆ; ವಿವರ ನೀಡುವುದು; ಈ ಕೇಂದ್ರಗಳ ಸ್ಥಾಪನೆಗೆ ರಾಜ್ಯ ಸರ್ಕಾರ ಎಷ್ಟು ಹಣ ನೀಡಿದೆ; ರಿಲೈಯನ್ಸ್ ಸಂಸ್ಥೆ ಎಷ್ಟು ಹಣ ನೀಡಿದೆ.

ಇ) ಇಂತಹ ಕಿಯಾಕ್ಸ್‌ಗಳ ಸ್ಥಾಪನೆ ಹಿಂದೆ ಇರುವ ಉದ್ದೇಶವೇನು; ಈವರೆಗೆ ಸ್ಥಾಪಿತವಾದ ಕೇಂದ್ರಗಳು ಏನು ಕ್ರಮ ಕೈಗೊಂಡಿದೆ?

ಶ್ರೀ ಎಂ.ಎಂ. ನಾಣಯ್ಯ (ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು):

ಅ) ರಾಜ್ಯದಲ್ಲಿ 7500 ಮಾಹಿತಿ ಕೇಂದ್ರ (ಇನ್‌ಫಾರ್ಮೇಷನ್ ಕಿಯಾಕ್ಸ್) ಗಳನ್ನು ಸ್ಥಾಪಿಸಲು ಜೂನ್ 2000ರಲ್ಲಿ ಸರ್ಕಾರವು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ರವರೊಂದಿಗೆ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಿದೆ.

ಆ) ಒಡಂಬಡಿಕೆ ಪತ್ರದ ಮೇರೆಗೆ ಕರಾರು ಪತ್ರಕ್ಕೆ ಸಹಿ ಹಾಕಬೇಕಾಗಿತ್ತು. ಆದರೆ ಕರಾರು ಪತ್ರಕ್ಕೆ ಸಹಿ ಮಾಡಿರುವುದಿಲ್ಲ ಆದ್ದರಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಇ) ವಿದ್ಯುನ್ಮಾನ ಆಡಳಿತ (e-governance)ವನ್ನು ಸಾಮಾನ್ಯ ಜನತೆಗೆ ತಲುಪಿಸುವ ಉದ್ದೇಶವನ್ನು ಹೊಂದಿರುತ್ತದೆ. ಇನ್ನು ಯಾವುದೇ ಕೇಂದ್ರಗಳು ಪ್ರಾರಂಭವಾಗಿರುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಬೃಹತ್ ಉದ್ದಿಮೆಗಳಿಗೆ ಭೂಮಿ ನೀಡಿಕೆ.

1640(1803)

ಶ್ರೀ ಜಯಪ್ರಕಾಶ್ ಹೆಗಡೆ.ಕೆ.(ಬ್ರಹ್ಮಾವರ): ಮಾನ್ಯ ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಬೃಹತ್ ಉದ್ದಿಮೆಗಳಿಗಾಗಿ ನಿರ್ಮಿಸಿ ನೀಡಲಾಗಿರುವ ಭೂಮಿಯ ವಿಸ್ತೀರ್ಣ ಎಷ್ಟು; ಯಾವ ಯಾವ ಉದ್ದಿಮೆಗಳಿಗೆ ಎಷ್ಟೆಷ್ಟು ಭೂಮಿಯನ್ನು ನೀಡಲಾಗಿದೆ.

ಆ) ಉಡುಪಿ ಜಿಲ್ಲೆಯ ಬ್ರಹ್ಮಾವರ ಹೋಬಳಿಯಲ್ಲಿ ವಿದ್ಯುತ್ ಸ್ಥಾವರವೊಂದಕ್ಕೆ ಭೂಮಿ ಮಂಜೂರು ಮಾಡಲಿರುವ ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ವಿವರಗಳೇನು?

ಶ್ರೀ ಆರ್.ವಿ.ದೇಶಪಾಂಡೆ (ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ